ದಿಃ 7.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ಎಸ್.ಪಿ. ವಕೀಲರಿಂದ ,**

1. ನಿಪಿ - 1 ರಲ್ಲಿನ ಸಹಿ ನನ್ನದು ಎಂದರೆ ಸರಿ. ಪಿರ್ಯಾದಿ ಬಳಿ ನಾನು ರೂ. 7,50,000/- ಗಳನ್ನು ಸಾಲವಾಗಿ ಪಡೆದಿದ್ದೆನು ಎಂದರೆ ಸರಿಯಲ್ಲ. ಸದರಿ ಸಾಲ ತೀರುವಳಿಗಾಗಿ ನಿಪಿ - 1 ಚೆಕ್ಕನ್ನು ನಾನು ಪಿರ್ಯಾದಿಗೆ ನೀಡಿದ್ದೆನು ಎಂದರೆ ಸಾಕ್ಷಿ ಪೋಲೀಸರು ನನ್ನಿಂದ ಸದರಿ ಚೆಕ್ಕನ್ನು ಬಲವಂತವಾಗಿ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪಿರ್ಯಾದಿ ಈ ಪ್ರಕರಣ ಹೂಡುವ ಪೂರ್ವದಲ್ಲಿ ನನಗೆ ನೋಟೀಸು ನೀಡಿದ್ದರು ಎಂದರೆ ಸರಿ. ಸದರಿ ನೋಟೀಸ್ ಗೆ ನಾನು ಉತ್ತರ ನೀಡಿರುವುದಿಲ್ಲ. ನಿಪಿ - 19 ರಲ್ಲಿ ನನ್ನ ಹೆಂಡತಿಯ ಸಹಿ ಇರುತ್ತದೆ. ದೂರು ದಾಖಲಿಸಲು ನನ್ನ ಹೆಂಡತಿಯೊಂದಿಗೆ ನಾನು ಸಹ ಠಾಣೆಗೆ ಹೋಗಿದ್ದೆನು. ಪಿರ್ಯಾದಿ ನನ್ನ ಬಳಿ ಸಾಲ ಮರುಪಾವತಿ ಮಾಡುವಂತೆ ಕೇಳಿದ ಕಾರಣ ನಾನು ನನ್ನ ಹೆಂಡತಿ ಮೂಲಕ ಪಿರ್ಯಾದಿ ವಿರುದ್ಧ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರ ಮುಂದೆ ಪಿರ್ಯಾದಿಗೆ ಹಣ ನೀಡುವುದನ್ನು ಒಪ್ಪಿ ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಿರ್ಯಾದಿ ಬಳಿ ನನ್ನ ಹೆಂಡತಿ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು ನನ್ನ ಹೆಂಡತಿ ಬಳಿ ಚೆಕ್ಕು ಇಲ್ಲದ ಕಾರಣ ಪಿರ್ಯಾದಿಗೆ ಪೋಲೀಸರು ನನ್ನ ಚೆಕ್ಕನ್ನು ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ - 19 ಬರವಣಿಗೆ ಪೋಲೀಸ್ ಠಾಣೆಯಲ್ಲಿ ಆಗಿರುತ್ತದೆ. ನಿಪಿ - 19 ರಂತೆ ಮೊದಲ 2 ಕಂತಿನ ಹಣವನ್ನು ನಾನು ಪಿರ್ಯಾದಿಗೆ ಹಣ ಪಾವತಿಸಿಲ್ಲ ಎಂದರೆ ಸರಿ. ಆ ನಂತರ ಪಿರ್ಯಾದಿ ನನ್ನ ಬಳಿ ಬಂದು ಹಣ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಎಲ್ಲಾ ಹಣವನ್ನು ಒಟ್ಟಿಗೆ ನೀಡುವುದಾಗಿ ಹೇಳಿ ಪಿರ್ಯಾದಿಗೆ ನಿಪಿ - 1 ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆದರೆ ನಿಪಿ - 1 ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದಿ ನನಗೆ ನೋಟೀಸು ನೀಡಿದ್ದರು ಸಹ ನಾನು ಪಿರ್ಯಾದಿಗೆ ಹಣ ಮರುಪಾವತಿಸಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-7.pdf

www.ecourtsindia.com

ನಿಪಿ - 1 ಚೆಕ್ಕನ್ನು ಸಾಲದ ಮರುಪಾವತಿಗಾಗಿ ನಾನು ಖುದ್ದು ಪಿರ್ಯಾದಿಗೆ ನೀಡಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುತ್ತದೆ. ಯಾವುದೇ ವ್ಯವಹಾರ ಮಾಡುವ ಪೂರ್ವದಲ್ಲಿ ಆ ಬಗ್ಗೆ ನಾನು ಇತರರನ್ನು ಕೇಳಿ ತಿಳಿದು ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ನನಗೆ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸರಿ. ನಿಪಿ - 1 ರಲ್ಲಿ ಕಂಡು ಬರುವ ಹಣವನ್ನು ನಾನು ಪಿರ್ಯಾದಿಗೆ ಹಿಂತಿರುಗಿಸಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-7.pdf

www.ecourtsindia.com